ಕರಾಸಕೈಅನಿನಿ
# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

**ನೊಂದಾಯಿತ ಕಛೇರಿ:** ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010

ದೂರವಾಣಿ:080-23407011-25 ಇ-ಮೈಲ್:kssidcho@karnataka.gov.in ವೆಬ್‌ಸೈಟ್:www.kssidc.co.in

---

ಸಂಖ್ಯೆ:ಸಮನ್ವಯ:ಬಾಡಿಗೆ ಪರಿಷ್ಕರಣೆ:ಮ:ಗೋ:ಫ್ಲ್ಯಾಟ್:2024 ದಿನಾಂಕ: 13-09-2024

## ಕಛೇರಿ-ಆದೇಶ

**ವಿಷಯ:** ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಬಾಡಿಗೆ ಆಧಾರದ ಮೇಲೆ ಹಂಚಿಕೆ ಮಾಡಲಾಗಿರುವ ಮಳಿಗೆ/ಗೋದಾಮು/ಬಹುಮಹಡಿ ಕಟ್ಟಡಗಳ ಬಾಡಿಗೆ ದರವನ್ನು ಪರಿಷ್ಕರಿಸಿ ನಿಗಧಿಪಡಿಸುವ ಬಗ್ಗೆ.

ಉಲ್ಲೇಖ: 1) ಕಛೇರಿ ಆದೇಶ ಸಂಖ್ಯೆ:ಸಮನ್ವಯ:ಬಾಡಿಗೆ ಪರಿಷ್ಕರಣೆ:ಮ:ಗೋ: ಫ್ಲ್ಯಾಟ್:2022 ದಿನಾಂಕ 26-09-2023
2) ದಿನಾಂಕ 25.07.2024 ರಂದು ಜರುಗಿದ 373 ಮಂಡಳಿ ಸಭೆ ನಡವಳಿ.

**************

ವಿಷಯಕ್ಕೆ ಸಂಬಂಧಪಟ್ಟಂತೆ, ಉಲ್ಲೇಖಿತ ಕಛೇರಿ ಆದೇಶದಲ್ಲಿ ನಿಗಮದ ಮಳಿಗೆ/ಗೋದಾಮು/ಬಹುಮಹಡಿ ಕಟ್ಟಡಗಳಿಗೆ ನಿಗದಿಪಡಿಸಿದ ಬಾಡಿಗೆ ದರಗಳು ದಿನಾಂಕ 31.07.2024ರಂದು ಮುಕ್ತಾಯವಾಗಿದ್ದು, ದಿನಾಂಕ 01.08.2024 ರಿಂದ ಬಾಡಿಗೆ ದರಗಳನ್ನು ಪರಿಷ್ಕರಿಸಬೇಕಾಗಿರುತ್ತದೆ.

ಅಂತೆಯೇ, ದಿನಾಂಕ 29.01.2013 ರಂದು ಜರುಗಿದ ನಿಗಮದ 325ನೇ ಆಡಳಿತ ಮಂಡಳಿ ಸಭೆಯಲ್ಲಿ ಬಾಡಿಗೆ ದರಗಳನ್ನು ಕಾಲಕಾಲಕ್ಕೆ ಪರಿಷ್ಕರಿಸಲು ವ್ಯವಸ್ಥಾಪಕ ನಿರ್ದೇಶಕರವರಿಗೆ ಅಧಿಕಾರ ನೀಡಿರುವ ಹಿನ್ನೆಲೆಯಲ್ಲಿ ಹಾಗೂ ಉಲ್ಲೇಖ (2)ರ ಮಂಡಳಿ ಸಭೆಯ ತೀರ್ಮಾನದಂತೆ, ಈಗ ಚಾಲ್ತಿಯಲ್ಲಿರುವ ಬಾಡಿಗೆ ದರಗಳ ಮೇಲೆ ಶೇಕಡ 05 ರಷ್ಟು ಹೆಚ್ಚಳ ಮಾಡಿ **ದಿನಾಂಕ 01.08.2024 ರಿಂದ 30.06.2025ರವರೆಗೆ** (11 ತಿಂಗಳ ಅವಧಿಗೆ) **'ಬಾಡಿಗೆ ದರ'**ಗಳನ್ನು ಈ ಕೆಳಕಂಡಂತೆ ಪರಿಷ್ಕರಿಸಿ ನಿಗಧಿಪಡಿಸಲಾಗಿದೆ.

| ಕ್ರ ಸಂ. | ಸ್ಥಳ | ಮಳಿಗೆ/ಗೋದಾಮು/ಬಹುಮಹಡಿ ಕಟ್ಟಡಗಳ ಬಾಡಿಗೆ ದರ ಪ್ರತಿ ತಿಂಗಳು, ಪ್ರತಿ ಚ.ಮೀ.ಗಳಿಗೆ (ರೂ.ಗಳಲ್ಲಿ) | |
|---|---|---|---|
| | | **01.09.2023ರಿಂದ 31.07.2024ರವರೆಗೆ (ಚಾಲ್ತಿಯಲ್ಲಿದ್ದಂತೆ)** | **01.08.2024ರಿಂದ 30.06.2025ರವರೆಗೆ (ಪರಿಷ್ಕೃತ ದರ)** |
| 1. | <u>ಬೆಂಗಳೂರು ನಗರ</u><br>ರಾಜಾಜಿನಗರ, ದ್ಯಾವಸಂದ್ರ, ಹೆಚ್.ಎ.ಎಲ್, ವಿದ್ಯುನ್ಮಾನನಗರ, ಎನ್.ಜಿ.ಇ.ಎಫ್, ಬೊಮ್ಮಸಂದ್ರ-1,2,3. ಕುಂಬಳಗೂಡು, ಯಲಹಂಕ. | **172** | **181** |
| 2. | <u>ಬೆಂಗಳೂರು ಗ್ರಾಮಾಂತರ</u><br>ದೊಡ್ಡಬಳ್ಳಾಪುರ, ರಾಮನಗರ, ಹೊಸಕೋಟೆ, ಜಿಗಣಿ-1,2 | **46** | **48** |
| 3. | ಪೀಣ್ಯಾ/ವಿದ್ಯುನ್ಮಾನ ನಗರ/ರಾಜಾಜಿನಗರ/ ಕೈವ.ಗಳಲ್ಲಿನ ಬಹುಮಹಡಿ ಮಳಿಗೆಗಳಿಗೆ | **383** | **402** |
| 4. | ಹುಬ್ಬಳ್ಳಿ/ಮೈಸೂರು/ಮಂಗಳೂರು/ಬೆಳಗಾವಿ | **108** | **113** |
| 5. | ಇತರೆ ಜಿಲ್ಲಾ ಕೇಂದ್ರಗಳು | **85** | **89** |
| 6. | ಇತರೆ ಸ್ಥಳಗಳು | **46** | **48** |

.2.

ನಿಗಮದ ವತಿಯಿಂದ ಇತರೆ ಸ್ಥಳಗಳಲ್ಲಿ ಹೊಸದಾಗಿ ನಿರ್ಮಾಣ ಮಾಡುವ ಮಳಿಗೆ/ಬಹುಮಹಡಿ ಕಟ್ಟಡಗಳ ಮಳಿಗೆಗಳಿಗೆ ಬಾಡಿಗೆ ದರವನ್ನು ಪ್ರತ್ಯೇಕವಾಗಿ ನಿಗಧಿಪಡಿಸಲಾಗುವುದು.

ನಿಗಮದಿಂದ ಬಾಡಿಗೆ ಆಧಾರದ ಮೇಲೆ ಹಂಚಿಕೆಯಾದ ಮಳಿಗೆಗಳ ಹಂಚಿಕೆದಾರರಿಗೆ ಅವರಿಗೆ ಹಂಚಿಕೆಯಾದ ಆಯಾ ಮಳಿಗೆಯ **'ಒಳ-ಆವರಣದ' (Carpet Area)** ವಿಸ್ತೀರ್ಣಕ್ಕೆ ಮಾತ್ರ ಬಾಡಿಗೆ ದರವನ್ನು ವಿಧಿಸತಕ್ಕದ್ದು ಹಾಗೂ ಕೈಗಾರಿಕೇತರ ಚಟುವಟಿಕೆಗಾಗಿ ಬಾಡಿಗೆ ಯೋಜನೆ ಅಡಿಯಲ್ಲಿ ಹಂಚಿಕೆ ಮಾಡಲಾಗುವ ಮಳಿಗೆಗಳು/ಬಹುಮಹಡಿ ಮಳಿಗೆಗಳಿಗೆ ಪ್ರಚಲಿತ ದರ + ಶೇ.20 ರಷ್ಟು ಬಾಡಿಗೆ ವಿಧಿಸತಕ್ಕದ್ದು ಮತ್ತು ಗೋದಾಮನ್ನು ಉಗ್ರಾಣವನ್ನಾಗಿ ಉಪಯೋಗಿಸದೇ, ಉಗ್ರಾಣೇತ್ತರ ಚಟುವಟಿಕೆಗೆ ಉಪಯೋಗಿಸಿದ್ದಲ್ಲಿ, ಪರಿಷ್ಕೃತ ಬಾಡಿಗೆ ದರದ **ಒಂದೂವರೆ ಪಟ್ಟು** ಬಾಡಿಗೆ ವಸೂಲಿ ಮಾಡತಕ್ಕದ್ದು. ವಾಣಿಜ್ಯ ಕಾರ್ಯಚಟುವಟಿಕೆಗಳಿಗೆ ಉಪಯೋಗಿಸಿದ್ದಲ್ಲಿ **ದುಪ್ಪಟ್ಟು (Double)** ಬಾಡಿಗೆ ವಿಧಿಸಿ ವಸೂಲಿ ಮಾಡತಕ್ಕದ್ದು.

ಮುಂದುವರೆದು, ಈ ಮೇಲಿನ ನಿಗಧಿತ ಅವಧಿಯು ಪೂರ್ಣಗೊಂಡ ನಂತರ, ನಿಗಮದಿಂದ ಪರಿಷ್ಕೃತ ಆದೇಶ ಹೊರಡಿಸುವವರೆಗೆ ಚಾಲ್ತಿ ಬಾಡಿಗೆ ದರದ ಶೇ. 05 ರಷ್ಟು ಹೆಚ್ಚಳಗೊಳಿಸತಕ್ಕದ್ದು.

ಬಾಡಿಗೆ ಲೆಕ್ಕ ಹಾಕುವಾಗ ಪೈಸೆಗಳು ಬಂದಲ್ಲಿ ಮೊಬಲಗನ್ನು ಮುಂದಿನ ರೂಪಾಯಿಗೆ ಪೂರ್ಣಾಂಕಗೊಳಿಸತಕ್ಕದ್ದು.

ಮೇಲೆ ಸೂಚಿಸಲಾಗಿರುವ ಆದೇಶಗಳನ್ನು ತಪ್ಪದೇ **ಕಡ್ಡಾಯವಾಗಿ** ಹಾಗೂ **ಕಟ್ಟುನಿಟ್ಟಾಗಿ** ಪಾಲಿಸತಕ್ಕದ್ದು.

**ವ್ಯವಸ್ಥಾಪಕ ನಿರ್ದೇಶಕರು**

**ಅವರಿಗೆ,**

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ/ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ದಾವಣಗೆರೆ/ಬಳ್ಳಾರಿ.

**ಪ್ರತಿ:**

1. ಪ್ರಧಾನ ವ್ಯವಸ್ಥಾಪಕರು(ಆಡಳಿತ&ಭೂಸ್ವಾಧೀನ)/(ಕೈವ)/(ಹಣಕಾಸು), ಕರಾಸಕೈಅನಿನಿ, ಬೆಂಗಳೂರು
2. ಮುಖ್ಯ ಅಭಿಯಂತರರು-ಪ್ರ ಕರಾಸಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು(ಕೈವ)ವ-1&2/(ಆ.ಲೆ.ಪ)/(ವಾಣಿಜ್ಯ), ಕರಾಸಕೈಅನಿನಿ, ಬೆಂಗಳೂರು
4. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಹಣಕಾಸು)/(ಆಡಳಿತ), ಕರಾಸಕೈಅನಿನಿ, ಬೆಂಗಳೂರು
5. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು
6. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
7. ವ್ಯವಸ್ಥಾಪಕರು(ಇಡಿಪಿ), ಕರಾಸಕೈಅನಿನಿ, ಬೆಂಗಳೂರು, ಮಾಹಿತಿಗಾಗಿ ಹಾಗೂ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.
8. ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.